ಸ್ಫೂರ್ತಿಯ ಸೆಲೆ



ನಮ್ಮ ಜೀವನದಲ್ಲಿ ಎರಡು ದಿನಗಳು ಅತಿ ಮುಖ್ಯ: ಮೊದಲನೆಯದು ಜನ್ಮದಿನ, ಎರಡನೆಯದು ನಾವೇಕೆ ಜನಿಸಿದೆವು ಎಂದು ಅರಿತ ದಿನ.

● ಮಾರ್ಕ್ ಟ್ವೇನ್

ಗೂಳಿಯ ಜತೆ ಗುದ್ದಾಟ

1959ರಲ್ಲಿ ಪ್ರಕಟಗೊಂಡ ತಮಿಳು ಕಾದಂಬರಿ ಮುಖ್ಯ ವಸ್ತು ಗೂಳಿ ಕಾಳಗ. 96 ಪುಟಗಳ ಈ ಕಿರು ಕಾದಂಬರಿಯಲ್ಲಿ ಗೂಳಿ ಮತ್ತು ಮನುಷ್ಯನ ನಡುವಿನ ವಿವಿಧ ಆಯಾಮಗಳ ಸಂಬಂಧ, ಗ್ರಾಮೀಣ ರಾಜಕೀಯ ಎಲ್ಲವೂ ಇದೆ.

● ಬೇದ್ರೆ ಮಂಜುನಾಥ, ಮೈಸೂರು



ಸಂಕ್ರಾಂತಿಯ ಸಂಭ್ರಮದಲ್ಲಿ ಗ್ರಾಮೀಣ ಕ್ರೀಡೆಗಳಿಗೆ ಎಲ್ಲಿಲ್ಲದ ಮಹತ್ವ ಮತ್ತು ಪ್ರಾಶಸ್ತ್ಯ ದೊರೆಯುತ್ತದೆ. ಎತ್ತನ್ನು ಕಿಚ್ಚಿನ ಮೂಲಕ ಹಾಯಿಸುವುದು, ಎತ್ತಿನ ಓಟ, ಎತ್ತಿನ ಬಂಡಿಯ ಓಟ, ಗೂಳಿ ಕಾಳಗ ಜಲ್ಲಿಕಟ್ಟು ವಿಶೇಷ ಗಮನ ಸೆಳೆಯುತ್ತವೆ. ಮನುಷ್ಯ ಮತ್ತು ಪ್ರಾಣಿಗಳ ನಡುವೆ ಜಿದ್ದಾಜಿದ್ದಿನ ಕಾಳಗಕ್ಕೆ ಇದು ವೇದಿಕೆಯೂ ಹೌದು.

ತಮಿಳುನಾಡಿನ ಮಧುರೈ, ರಾಮನಾಥಪುರ ಸುತ್ತಲಿನ ಜಿಲ್ಲೆಗಳಲ್ಲಿ ಜಲ್ಲಿಕಟ್ಟು ಶೌರ್ಯ ಸಾಹಸಗಳ ಪ್ರತೀಕ. ಒಂದು ಜಿಗಿತ, ಎರಡು ಜಿಗಿತ; ಮೂರನೇ ಜಿಗಿತಕ್ಕೆ ಆತ ನಿಂತುಬಿಟ್ಟ. ಮೂರು ಬಾರಿಯೂ ಗೂಳಿ ಅವನನ್ನು ತಿವಿದು ಎಸೆಯಲು ಯತ್ನಿಸಿತ್ತು. ಮನುಷ್ಯನಿಗೂ ಮೃಗಕ್ಕೂ ನಡೆಯುವ ಈ ಕಾಳಗಕ್ಕೆ ಜಲ್ಲಿಕಟ್ಟು ಎಂದು ಹೆಸರು. ಅದು ನಡೆಯುವ ಜಾಗ – ವಾಡಿವಾಸಲ್, ಎಂದು ಜಲ್ಲಿಕಟ್ಟನ್ನು ಪರಿಚಯಿಸುತ್ತಾ ಕಾದಂಬರಿಕಾರ ಚಿ. ಸು. ಚೆಲ್ಲಪ್ಪ, 'ವಾಡಿವಾಸಲ್‌ನಲ್ಲಿ ಮನುಷ್ಯನ ರಕ್ತ ಬೀಳಬಹುದು. ಆದರೆ ಗೂಳಿಯ ರಕ್ತ ಬೀಳುವಂತಿಲ್ಲ. ಮನುಷ್ಯನಿಗೆ ಇದು ಆಟವೇ ಆಗಿರಬಹುದು, ಆದರೆ ಗೂಳಿಗೆ ಇದು ಆಟವಲ್ಲ' ಎಂದು ಈ ಸಾಹಸ ಕ್ರೀಡೆಯ ಕ್ರೌರ್ಯವನ್ನು ತೆರೆದಿಡುತ್ತಾರೆ ತಮ್ಮ ವಾಡಿವಾಸಲ್ ಕಾದಂಬರಿಯಲ್ಲಿ.

ಅರ್ಧ ಶತಮಾನದ ಹಿಂದಿನ ಕೃತಿ

1959 ರಲ್ಲಿ ತಮಿಳಿನಲ್ಲಿ ಪ್ರಕಟವಾದ ಚಿತ್ರಕತೆ ಶೈಲಿಯ ಕ್ಲಾಸಿಕ್ ಕಾದಂಬರಿಯನ್ನು ಇಂಜಿನಿಯರ್ ಮತ್ತು ಸಿನಿಮಾ ಸಹನಿರ್ದೇಶಕ ಸತ್ಯಕಿ ಅವರು ಅಷ್ಟೇ ಸಿನಿಮೀಯ ಶೈಲಿಯ ಸಂಭಾಷಣೆಯೊಂದಿಗೆ ಕನ್ನಡಕ್ಕೆ ತಂದಿದ್ದಾರೆ. (ಪ್ರಕಾಶಕರು: ಛಂದ ಪುಸ್ತಕ, ಬೆಂಗಳೂರು.) ಕೆ.ಎಂ. ಆದಿಮೂಲನ್ ಅವರ ಅಪರೂಪದ ರೇಖಾಚಿತ್ರಗಳು ಕಥೆಯನ್ನು ಕಣ್ಣಿಗೆ ಕಟ್ಟಿಸುತ್ತವೆ. ಈ ಕಾದಂಬರಿಯನ್ನಾಧರಿಸಿದ ಸಾಹಸಮಯ ಚಿತ್ರವೊಂದು ತಮಿಳಿನಲ್ಲಿ ಸಿದ್ಧವಾಗುತ್ತಿದ್ದು, ಇದಕ್ಕಾಗಿ ಗೂಳಿಯೊಂದನ್ನು ಪಳಗಿಸಲಾಗುತ್ತಿದೆ.

ಬೇರೆ ಆಟಗಳಲ್ಲಿ ಆಡುವ ಇಬ್ಬರೂ ಆಟಗಾರರಿಗೆ ಇದು ಆಟವೆಂದು ತಿಳಿದಿರುತ್ತದೆ. ಆದರೆ ಜಲ್ಲಿಕಟ್ಟುವಿನಲ್ಲಿ ಹಾಗಲ್ಲ, ಮನುಷ್ಯನಿಗೆ ಮಾತ್ರ ಇದು ಆಟ. ಮೃಗಕ್ಕೆ ಅದು ಗೊತ್ತಿಲ್ಲ, ಆಟವೆಂದು ತಿಳಿಯದ ಮೃಗವನ್ನು ಅಡಗಿಸಲು ಮನುಷ್ಯನಿಗೆ ಸಾಕಷ್ಟು ಯುಕ್ತಿಗಳಿವೆ. ಮೃಗವು ಅದನ್ನೆಲ್ಲಾ ಮೀರಿ ಆತನಿಂದ ತಪ್ಪಿಸಿಕೊಳ್ಳಬೇಕು...... ಸೋತುಹೋದ ತನ್ನ ಕಾರಿಯನ್ನು ಗುಂಡಿಟ್ಟು ಕೊಲ್ಲುವ ಜಮೀನ್ದಾರನ ಒಳಗಿರುವ ಅದೇ ಮೃಗತ್ವ, ತಂದೆಯ ಸಾವಿಗೆ ಸೇಡು ತೀರಿಸಿಕೊಳ್ಳಲು ಬರುವ ಪಿಚ್ಚೆಯಲ್ಲೂ ಕಾಣಬಹುದು. ಅದರ ತೀವ್ರತೆಗಳು ಮತ್ತು ಉದ್ದೇಶಗಳು ಬೇರೆ ಅಷ್ಟೆ, ಎಂದು ಕಾದಂಬರಿಯ ಮುನ್ನುಡಿಯಲ್ಲಿ ಜಲ್ಲಿಕಟ್ಟು ಕ್ರೀಡೆಯ ಇತಿಹಾಸವನ್ನು ವಿವರವಾಗಿ ತೆರೆದಿಡುತ್ತಾರೆ ಪೆರುಮಾಳ್ ಮುರುಗನ್.

ಈ ಕ್ರೀಡೆ, ಕೇವಲ ಆಟವಲ್ಲ, ಇದೊಂದು ಜೀವನಶೈಲಿ. ತಮಿಳು ಸಾಹಿತ್ಯ ಕೃತಿ ಕಲಿತ್ತೊಗೈನಿಂದ ಹಿಡಿದು ಆಧುನಿಕ ಸಣ್ಣ ಕಥೆ, ಕಾದಂಬರಿಗಳವರೆಗೆ ವಿವಿಧ ಕೃತಿಗಳಲ್ಲಿ ಮೂಡಿ ಬಂದಿರುವ ಜಲ್ಲಿಕಟ್ಟು ಕ್ರೀಡೆಯ ಕಿರುಪರಿಚಯ ಇಲ್ಲಿದೆ.

ಜಮೀನ್ದಾರನೊಬ್ಬನ ಪ್ರತಿಷ್ಠೆಯ ಸಂಕೇತವಾಗಿ ಹಲವು ಜನರನ್ನು ಸೋಲಿಸಿ ಮೆರೆದಿದ್ದ ಕಾರಿ ಎಂಬ ಗೂಳಿಯನ್ನು ಅಡಗಿಸಲು ಪ್ರಯತ್ನಿಸಿದ ಅಂಬುಲಿ ಎಂಬ ಸಾಹಸಿ ಕಾರಿಯಿಂದಲೇ ಇರಿಯಲ್ಪಟ್ಟು ಪ್ರಾಣಕಳೆದುಕೊಂಡಿರುತ್ತಾನೆ. ಮುಂದೊಮ್ಮೆ ಅವನ ಮಗ ಪಿಚ್ಚಿ ಅದೇ ಕಾರಿಯನ್ನು ಅಡಗಿಸಿ ತನ್ನ ತಂದೆಯ ಹೆಸರನ್ನು ಎತ್ತಿಹಿಡಿಯುತ್ತಾನೆ. ಅಂಬುಲಿಯ ಸೋಲಿನಿಂದ ಪಿಚ್ಚಿಯ ಗೆಲುವಿನವರೆಗಿನ ರೋಚಕ ಕಥೆಯೇ ಈ ವಾಡಿವಾಸಲ್. ಇಲ್ಲಿ ವಂಚನೆ, ಆಕ್ರೋಶ, ದ್ವೇಷ, ಸಾಧಿಸುವ ಛಲ ಎಲ್ಲವೂ ಇದೆ. ಇದೊಂದು ರಣರಂಗ. ಜಲ್ಲಿಕಟ್ಟು ಎಂಬುದನ್ನು ಇಲ್ಲಿ ಅಧಿಕಾರ ವಿರೋಧದ ರೂಪಕವಾಗಿಯೂ, ಜಾತಿಯ ದರ್ಪದ ದಮನದ ಸಂಕೇತವಾಗಿಯೂ ತೆಗೆದುಕೊಳ್ಳಬಹುದು.

ವಾಡಿವಾಸಲ್ (ಜಲ್ಲಿಕಟ್ಟು ಕುರಿತು 1959ರಲ್ಲಿ ಬರೆದ ತಮಿಳು ಕಾದಂಬರಿ)
ಮೂಲ: ಚಿ. ಸು. ಚೆಲ್ಲಪ್ಪ
ಕನ್ನಡಕ್ಕೆ : ಸತ್ಯಕಿ
ಪುಟಗಳು: 96
ಬೆಲೆ : ರೂ.70
ಪ್ರಕಾಶಕರು : ಛಂದ ಪುಸ್ತಕ, ಬೆಂಗಳೂರು

ಕಥೆಯ ಓಟ ಗೂಳಿಯ ಓಟದಷ್ಟೇ ವೇಗವಾಗಿದೆ. ಜಲ್ಲಿಕಟ್ಟುವಿನಲ್ಲಿ ಪಾಲ್ಗೊಳ್ಳುವ ಎತ್ತು, ಗೂಳಿಗಳನ್ನು ಹೊರಬಿಡುವ ಇಕ್ಕಟ್ಟಾದ ಬಾಗಿಲು ವಾಡಿವಾಸಲ್. ಇದರ ಹತ್ತಿರವೇ ಇರುವ ಮತ್ತೊಂದು ಚಿಕ್ಕ ಬಾಗಿಲು ತಿಟ್ಟಿವಾಸಲ್. ವಾಡಿವಾಸಲ್‌ನಿಂದ ಭುಸುಗುಟ್ಟುತ್ತಾ ವೇಗವಾಗಿ ನುಗ್ಗುವ ಗೂಳಿಯ ರೋಷ, ಅದನ್ನು ಅಡಗಿಸಲು ಉತ್ಸುಕರಾಗಿರುವ ಸಾಹಸಿಗಳು, ಅಪಾಯದ ಆಟ ನೋಡಲೆಂದೇ ಸುತ್ತಲ ಹತ್ತಾರು ಹಳ್ಳಿಗಳಿಂದ ಬುತ್ತಿಕಟ್ಟಿಕೊಂಡು ಬರುವ ಸಾವಿರಾರು ಜನರು, ಸೆಲ್ಲಾಯಿ ಸಾಟ್ಟು ಎಂದೇ ಹೆಸರುವಾಸಿಯಾದ ಜಲ್ಲಿಕಟ್ಟು ಆಟವನ್ನು ಪ್ರತಿಷ್ಠೆಯಾಗಿ ಸ್ವೀಕರಿಸುವ ಗೂಳಿಗಳ ಮಾಲೀಕ ಜಮೀನ್ದಾರರು, ಎತ್ತುಗಳನ್ನು ಅಡಗಿಸಲೆಂದೇ ಹಠತೊಟ್ಟ ರೋಷಾವೇಷದ ಯುವಜನರು, ಅವರ ವೇಗ, ಕೌಶಲಗಳ ಪ್ರದರ್ಶನ ಈ ಕಾದಂಬರಿಯ ಜೀವಾಳ.

ಒಟ್ಟು 96 ಪುಟ ಹೊಂದಿರುವ ಈ ಕಿರುಕಾದಂಬರಿಯ ಕೊನೆಯ 25 ಪುಟಗಳಲ್ಲಿನ ವಿವರಣೆ, ಘಟನಾವಳಿಗಳ ಓಟ, ಒಂದು ಸಾಹಸಮಯ ಸಿನಿಮಾ ದೃಶ್ಯವನ್ನು ಕಣ್ಣಿಗೆ ಕಟ್ಟುವಂತೆ ಮಾಡುತ್ತದೆ. ಇದನ್ನು ಬೆಳ್ಳಿತೆರೆಗೆ ತರುತ್ತಿರುವ ಸೂರ್ಯ ಪಿಚ್ಚಿಯಂತೆ ಸಾಹಸ ಪ್ರದರ್ಶಿಸುವುದನ್ನು ನೋಡುವ ಕಾಲ ಹತ್ತಿರವಾಗುತ್ತಿದೆ ಅನ್ನಿಸುತ್ತಿದೆ.

ಗೆದ್ದವನಿಗೆ ರೇಷ್ಮೆ ಶಾಲು

'ಏಳೇಳು ಲೋಕದಲ್ಲೂ, ಅಷ್ಟ ದಿಕ್ಕುಗಳಲ್ಲೂ, ವಿಜಯ ಪತಾಕೇನ ಹಾರಿಸಿ ಬಂದಿರೋ ನಮ್ಮ ಪೆರಿಯಪಟ್ಟಿ ಜಮೀನ್ದಾರ್ರು.... ನಮ್ಮೆಲ್ರ ಯಜಮಾನ್ರು.. ತಮ್ಮ ಗೂಳಿಯಾದ ಕಾರಿ ಕೊಂಬಿನ್ ಮಧ್ಯೆ ಎಲ್ಡ್ ಪೌನು ಬಂಗಾರಾನ ನೇತಾಕಪ್ರವ್ರೋ! ದನ ಹಿಡ್ಯೋಕ್ ಬಂದಿರೋ ದಾಂಡಿಗ್ರೆಲ್ಲಾ ಗಮ್ನ ಇಟ್ಟು ಕೇಳಿಸ್ಕಳೀ....ನಿಮ್ ಅಪ್ಪಯ್ಯಾ ಅಜ್ಜಯ್ಯನ್ ಕಥೆಗಳ್ನೆಲ್ಲಾ ಮಾತಾಡ್ಕಂಡ್ ನಿಲ್ಲದ್ ಬಿಟ್ಟು... ನೀವೇನೂ ಅಂತ ತೋರುಸ್ರಪ್ಪ... ಮದ್ವೆ ಆಗ್ದೆ ಇರೋ ಹೈಕ್ಳುಗಳ... ಹೆಂಡ್ತೀನ್ ತಬ್ಬಳಂಗೆ ನಮ್ಮ ಕಾರಿ ಮ್ಯಾಕೆ ಕೈಹಾಕ್ ನ್ವಾಡಿ... ಕಾರೀನ ಮಣ್ ಮುಕ್ಕುಸ್ದ್ರೆ ಈ ಎಲ್ಡ್ ಪೌನು ನಿಮ್ಗೇಯಾ.... ಅಸ್ಟೇ ಅಲ್ಲ... ಗೆಲ್ಲೋ ವೀರಂಗೆ ನಮ್ ಜಮೀನ್ದಾರಯ್ಯ ರೇಷ್ಮೆ ಶಾಲೂನ ಹಾಕಿ ಗೌರವ ಮಾಡ್ತಾರಂತೆ... ಗಂಡ್ಸಾದೋನ್ ಬಂದು ಹಿಡೀರಿ... ಹೆದ್ರುಪುಕ್ಲು ಹೆಂಗುಸ್ರೆಲ್ಲಾ ಹಂಗೇ ಓಡೋಗಿ!' ಎಂದು ಡಂಗೂರದವ ಸಾರಿ, ಜೋರಾಗಿ ತಮಟೆ ಬಾರಿಸಿದ. ಜಲ್ಲೀಕಟ್ಟು ಕ್ರೀಡೆ ಹೇಗಿರುತ್ತದೆ ಎಂದು ತಿಳಿದುಕೊಳ್ಳಲು ಈ ಮಾತುಗಳೇ ಸಾಕು!



● ಡಾ . ಅರ್ಚನಾ ಆರ್.

ಬಂಡಾಯವೆದ್ದ ಮೊದಲ ಮಹಿಳೆ

ನಮ್ಮ ದೇಶದಲ್ಲಿ, ಭಾರತ ಉಪಖಂಡದಲ್ಲಿ, ಸ್ತ್ರೀ ದಾಸ್ಯದ ವಿರುದ್ಧ ಮೊದಲು ಬಂಡೆದ್ದವಳು, ಯಯಾತಿಯ ಮಗಳು ಮಾಧವಿ.

ಡಾ. ಅನುಪಮಾ ನಿರಂಜನ ಅವರ ಜನಪ್ರಿಯ ಕಾದಂಬರಿ 'ಮಾಧವಿ' . ಕನ್ನಡ ಸಾಹಿತ್ಯದಲ್ಲಿ ಸ್ತ್ರೀವಾದಿ ನೆಲೆಯನ್ನು ಎದ್ದು ಕಾಣುವಂತೆ ದಾಖಲಿಸಿದ ಮಹತ್ವದ ಕೃತಿ. ಇದೊಂದು ಪೌರಾಣಿಕ ಕಾದಂಬರಿ. ಕಾದಂಬರಿಯ ಆರಂಭದಲ್ಲಿ ಅನುಪಮಾ ಅವರು 'ಈ ಉಪಖಂಡದಲ್ಲಿ ಸ್ತ್ರೀ ದಾಸ್ಯದ ವಿರುದ್ಧ ಮೊದಲು ಬಂಡೆದ್ದವಳು ಮಾಧವಿ' ಎಂದಿದ್ದಾರೆ. ಮಾಧವಿಯ ಬಂಡಾಯದ ಧ್ವನಿಯನ್ನು ತಮ್ಮ ವಿಶಿಷ್ಟ ಬರಹದ ಶೈಲಿಯಲ್ಲಿ ಅನುಪಮಾ ಅವರು ಚಿತ್ರಿಸಿದ್ದಾರೆ. ಕಾದಂಬರಿಯನ್ನು ಓದಿದ ನಂತರ ಯೋಚಿಸಿದಷ್ಟೂ ನನಗೆ ಮಾಧವಿ ಶೋಷಿತ ಹೆಣ್ಣಿನ ಸಂಕೇತವಾಗಿ ಕಂಡಳು, ಅಲ್ಲದೆ ಮನಸ್ಸನ್ನು ಕಾಡುವ ಪಾತ್ರವಿದು ಎನಿಸಿತು .

ಊಳಿಗಮಾನ್ಯ ಸಮಾಜದ ವ್ಯವಸ್ಥೆಯಲ್ಲಿ ಹೆಂಗಸರನ್ನ ಕೊಳ್ಳುವುದು, ಮಾರುವುದು, ದಾನ ಮಾಡುವುದು, ಸಾಮಾನ್ಯ ಪದ್ಧತಿಯಾಗಿತ್ತು. ಮಹಾರಾಜ ಯಯಾತಿ ತನ್ನ ಮಗಳನ್ನು ಈ ರೀತಿ ಬಾಡಿಗೆಗೆ ಕೊಟ್ಟದ್ದೂ ಮಹಾಭಾರತದಲ್ಲಿ ಬರುವ ಉಪಕಥೆಯಲ್ಲಿ ಉಲ್ಲೇಖಿತವಾಗಿದೆ. ಅದರಂತೆ ನಿಯೋಗ ಪದ್ಧತಿ ಮಹಾಭಾರತದ ಕಾಲದಲ್ಲಿ ರೂಢಿಯಲ್ಲಿತ್ತು . ಇಲ್ಲಿ 'ನಿಯೋಗ 'ಎಂದರೆ ಹೆಂಡತಿಯನ್ನು ಭೂಮಿಯನ್ನಾಗಿ ಮಾಡಿ ಬೇರೊಬ್ಬ ಪುರುಷನಿಂದ ಮಗನನ್ನ ಪಡೆಯುವುದು. ಕುಂತಿಗೆ ಮಕ್ಕಳಾದದ್ದು ಹೀಗೆ. ಈ ಕಾದಂಬರಿಯಲ್ಲಿ ಮಾಧವಿ ಕೂಡ ಮಕ್ಕಳನ್ನು ಪಡೆಯಲು 'ಭೂಮಿ'ಯಾಗಿ ಉಪಯೋಗಿಸಲ್ಪಟ್ಟವಳು. ಮೌಲ್ಯಗಳೇ ಸಂಕುಚಿತವಾಗಿದ್ದ ಕಾಲದಲ್ಲಿ ತಾವು ಅಬಲೆಯಾದ ಹೆಂಗಸನ್ನು ಹಿಂಸಿಸುತ್ತಿದ್ದೇವೆ ಎಂಬ ಭಾವನೆಯೇ ಪುರುಷರಿಗೆ ಬರಲಿಲ್ಲ ಎಂಬುದನ್ನು 'ಮಾಧ' ಕಾದಂಬರಿಯಲ್ಲಿ ಕಾಣಬಹುದಾಗಿದೆ.

ಪ್ರಸ್ತುತ ಪೌರಾಣಿಕ ಕಾದಂಬರಿ 'ಮಾಧವಿ' ಕುರು ವಂಶದ ಮೂಲಪುರುಷ ರಾಜ ಯಯಾತಿಯ ಮಗಳು. ಹುಟ್ಟಿದ ದಿನದಿಂದಲೇ ಹೆಣ್ಣೆಂಬ ಕಾರಣಕ್ಕೆ ಪಿತನ ತಿರಸ್ಕಾರಕ್ಕೆ ಅಸಮಾಧಾನಕ್ಕೆ, ತುತ್ತಾದ ಕೂಸು 'ಅಪಶಕುನ' ಎಂಬ ಅಪವಾದ ಹೊತ್ತು ತಂದೆಯ ಪ್ರೀತಿಗಾಗಿ ಹಪಹಪಿಸುತ್ತಾಳೆ. ತಂದೆಯ ಮಮತೆ, ವಾತ್ಸಲ್ಯಕ್ಕೆ ಹಂಬಲಿಸಿ ದಾಸಿಯ ಆರೈಕೆಯಲ್ಲಿಯೇ ಬೆಳೆಯುತ್ತಾಳೆ. ಮುಂದೆ ಯಯಾತಿಯು ದೇವಯಾನಿಯನ್ನು ಮದುವೆಯಾಗಿ ಗಂಡುಮಕ್ಕಳ ತಂದೆಯಾದಾಗ ಮಾಧವಿ ಮತ್ತಷ್ಟು ತಂದೆಯಿಂದ ದೂರವಾಗುತ್ತಾಳೆ. ತಾರುಣ್ಯಕ್ಕೆ ಕಾಲಿಟ್ಟ ಮಾಧವಿಯೂ ರತಿದೇವಿಯನ್ನೇ ಮೀರಿಸುವ ಸುಂದರಿ, ದೇವಕನ್ಯೆಯಂತೆ ಕಂಗೊಳಿಸುತ್ತಾ, ತನ್ನ ಕನಸಿನ ರಾಜಕುಮಾರ, ಸ್ವಯಂವರದ ಕನಸು ಕಾಣುತ್ತಿರುವಾಗ, ವಿಶ್ವಾಮಿತ್ರನ ಶಿಷ್ಯ ಗಾಲವನ ಆಗಮನವು ಮುಂದಿನ ಅವಳ ಬದುಕನ್ನು ನರಕ ಸದೃಶವಾಗಿಸುತ್ತದೆ.



ಬ್ರಹ್ಮರ್ಷಿ ವಿಶ್ವಾಮಿತ್ರನ ಶಿಷ್ಯ ಗಾಲವ, ಗುರು ಬೇಡವೆಂದರೂ ಕೇಳದೆ ಗುರುದಕ್ಷಿಣೆ ಕೊಡುತ್ತೇನೆಂದು ಹಟ ಮಾಡಿದಾಗ ವಿಶ್ವಾಮಿತ್ರ ಅವನ ಅಹಂಕಾರಕ್ಕೆ ಬುದ್ಧಿ ಕಲಿಸಲೆಂದು ವಿಚಿತ್ರ ಗುರು ದಕ್ಷಿಣೆಯೊಂದನ್ನು ಕೇಳುತ್ತಾನೆ. ಅದರಂತೆ ಗಾಲವ 800 ಶ್ವೇತಾಶ್ವಗಳಿಗಾಗಿ (ಕಿವಿ ಮಾತ್ರ ಕಪ್ಪಾದ) ಯಯಾತಿಯ ಬಳಿಗೆ ಬರುತ್ತಾನೆ. ಆದರೆ ಅಂತಹ ಕುದುರೆಗಳು ಇಲ್ಲದೆ ಅವನ್ನು ಕೊಳ್ಳಲು ಧನ ಸಹಾಯವನ್ನೂ ಮಾಡಲಾಗದ ಸ್ಥಿತಿಯಲ್ಲಿದ್ದ ಯಯಾತಿ ತನ್ನ ಮಗಳನ್ನೇ ದಾನ ಮಾಡಿ, ಅವಳನ್ನು ಧನಿಕರಾದ ರಾಜರಿಗೆ ಮಾರಿ ಹಣ ಪಡೆಯುವಂತೆ ಸಲಹೆ ನೀಡುತ್ತಾನೆ.

ಮಗಳನ್ನೇ ಅಡವಿಟ್ಟ ತಂದೆ

ಇಲ್ಲಿ ಸ್ವಂತ ಮಗಳನ್ನು ಒಂದು ವಸ್ತುವಿನಂತೆ ಕಂಡು ಕ್ರಯವಿಕ್ರಯ ಮಾಡಿದ್ದು ಆ ಕಾಲದ ಹೆಣ್ಣಿನ ದಾರುಣ ಸ್ಥಿತಿಗೆ ಹಿಡಿದ ಕನ್ನಡಿಯಂತಿದೆ. ಒಬ್ಬರ ಬಳಿಯೇ 800 ಕುದುರೆ ದೊರೆಯದೇ ಇದ್ದಾಗ ರಾಜಕುಮಾರಿ ಮಾಧವಿಯನ್ನ ತಲಾ ಇನ್ನೂರು ಕುದುರೆಗಳಿಗಾಗಿ ಮೂವರು ರಾಜರ ಬಳಿ ಒಂದೊಂದು ವರ್ಷಗಳ ಅವಧಿಗೆ ಅಡವಿಡುತ್ತಾನೆ. ಅವಳಿಂದ ಮೂವರು ರಾಜರು ಗಂಡು ಸಂತಾನ ಪಡೆದ ಮೇಲೆ ವಿಶ್ವಾಮಿತ್ರರ ಬಳಿ ಬಂದು ಆರು ನೂರು ಕುದುರೆಗಳನ್ನು, ಕಡಿಮೆಯಾದ ಕುದುರೆಗಳ ಬದಲಿಗೆ ಒಂದುವರ್ಷದ ವರೆಗೆ ಮಾಧವಿಯನ್ನು ಅರ್ಪಿಸುತ್ತಾನೆ. ವಿಶ್ವಾಮಿತ್ರ ಅವಳನ್ನು ಮೋಹದಿಂದ ಸ್ವೀಕರಿಸುತ್ತ ಆ ಕುದುರೆಗಳ ಬದಲಿಗೆ ಮೊದಲೇ ಇವಳನ್ನು ತನಗೆ ಒಪ್ಪಿಸ ಬಾರದಿತ್ತೇ ಎಂದುಕೊಳ್ಳುವುದು ವಿಪರ್ಯಾಸವೇ ಸರಿ.

ಹೀಗೆ 'ಮಾಧವಿ' ಕಾದಂಬರಿಯಲ್ಲಿ ನಿರಂತರ ಶೋಷಣೆಗೆ ಒಳಗಾಗುತ್ತಲೇ, ಹೆತ್ತ ಮಕ್ಕಳಿಂದ ದೂರವಾಗಿ ಅನುಭವಿಸುವ ಯಾತನೆ ಕರಳು ಮಿಡಿಯುವಂತೆ ಚಿತ್ರಿತವಾಗಿದೆ. ಇಡೀ ಕಾದಂಬರಿಯಲ್ಲಿ ಪುರುಷನ ಕಾಮತೃಪ್ತಿಗೆ ಸ್ತ್ರೀ ಒಂದು ವಸ್ತುವಾಗಿ ಬಳಕೆಯಾಗುತ್ತಿದ್ದಳು. ಅವಳ ಅಲಂಕಾರ ಕೂಡ ಗಂಡಿನ ಕಣ್ಣಿಗೆ ಅಂದವಾಗಿ ಕಾಣಲು ಮಾತ್ರವೇ ಆಗಿರುತ್ತಿತ್ತು. ಗಂಡ ತನ್ನ ಹೆಂಡತಿಯನ್ನು ಮಾರಬಹುದಾಗಿತ್ತು, ದಾನ ಕೊಡಬಹುದಾಗಿತ್ತು. ಹಸುವಿನಂತೆ ಹೆಣ್ಣಿನ ಮಾರಾಟ ಮಾಡಬಹುದಾಗಿತ್ತು. ಅಂತೆಯೇ ಇದು ಮಗಳಿಗೂ ಅನ್ವಯವಾಗುತ್ತಿದ್ದ ನೀತಿಯಾಗಿತ್ತು. ಹಾಗಾಗಿಯೇ ಯಯಾತಿ ತನ್ನ ಮಗಳನ್ನ ಅಷ್ಟು ಸುಲಭವಾಗಿ ಮತ್ತು ಗಾಲವ ಅವಳನ್ನು ತನ್ನ ಗುರುದಕ್ಷಿಣೆಗಾಗಿ ತನಗೆ ಬೇಕಾದಂತೆ ಬಳಸಿಕೊಳ್ಳುತ್ತಾನೆ.

ಪ್ರತಿಭಟನೆ

ಮಾಧವಿ ರಾಜಕುಮಾರಿಯಾಗಿ ಹುಟ್ಟಿದರೂ ಸಾಮಾನ್ಯ ಸ್ತ್ರೀಯಂತೆಯೇ ಕಷ್ಟ ನಷ್ಟಗಳನ್ನ ಅನುಭವಿಸಿದಳು. ಪುರುಷರ ಮತ್ತು ಅಂದಿನ ಸಮಾಜದ ದಬ್ಬಾಳಿಕೆಗೆ, ಕ್ರೌರ್ಯಕ್ಕೆ ತುತ್ತಾದಳು. ಮಾಧವಿಯ ಭಾವನೆಗಳು, ಪ್ರತಿಕ್ರಿಯೆಗಳು ಎಲ್ಲಾ ಕಾಲದ ಸ್ತ್ರೀಯರು ತೋರಿಸುವಂಥವುಗಳೇ ಶೋಷಿತರು ತಮ್ಮ ಪರಿಸ್ಥಿತಿಯ ವಿರುದ್ಧ ಬಂಡಾಯವೇಳುವುದೂ ಸಹಜವಾದ ಪ್ರತಿಕ್ರಿಯೆ. ಅಂತೆಯೇ ಮಾಧವಿಯು ಕಾದಂಬರಿಯಲ್ಲಿ ಅನೇಕ ಬಾರಿ ಪ್ರತಿಭಟಿಸುವುದನ್ನು ಗುರುತಿಸಬಹುದು. ಸಮಾಜದಲ್ಲಿ ಶಕ್ತಿವಂತರರೂ ದುರ್ಬಲರ ಧ್ವನಿಯನ್ನು ಹತ್ತಿಕ್ಕುವುದು ಪ್ರತಿಭಟನೆಯನ್ನು ನಾಶಮಾಡುವಂತೆ ಇಲ್ಲಿಯೂ ಆಗುತ್ತದೆ. ಆತ್ಮಹತ್ಯೆ ಮಾಡಿಕೊಳ್ಳಲು ಮಾಧವಿಗೆ ಹಕ್ಕಿರುವುದಿಲ್ಲ ತಂದೆ ಯಯಾತಿ ಹಸು ಕರುಗಳನ್ನು ದಾನ ಮಾಡುವ ಹಾಗೆ ಮಾಧವಿಯನ್ನ ದಾನವಾಗಿ ಕೊಟ್ಟಾಗ ತನಗಿಷ್ಟವಿಲ್ಲದಿದ್ದರೂ, ತನ್ನ ತಂದೆಯ ವಯಸ್ಸಿನ ರಾಜನೊಂದಿಗೆ ಬದುಕುವ ಅನಿವಾರ್ಯತೆ ಬಂದರೂ, ಆ ಜೀವನದ ಬಗ್ಗೆ ಹೇಸಿಗೆಯಾದರೂ ಆ ಸಮಾಜದ ಧರ್ಮದಿಂದ ಅವಳಿಗೆ ಬಿಡುಗಡೆ ಇರಲಿಲ್ಲ.

ತನ್ನ ಮಗಳು ಕಣ್ಣೆದುರಿಗೆ ಬಂದಾಗ ಅವಳ ಕಥೆಯನ್ನ ಕೇಳಿ ಪಶ್ಚಾತ್ತಾಪ ಪಡುವ ಯಯಾತಿ ಆಗಲೂ ಸ್ವಾರ್ಥಿಯಂತೆಯೇ ವರ್ತಿಸುತ್ತಾನೆ. ತನ್ನ ಪಾಪಪ್ರಜ್ಞೆಯಿಂದ ಮುಕ್ತನಾಗಲು ಮಗಳಿಗೆ ಸ್ವಯಂವರ ಏರ್ಪಡಿಸುತ್ತಾನೆ. 'ನಿನಗಿಷ್ಟ ಬಂದ ರಾಜ ಕುಮಾರ ನನ್ನ ಆರಿಸಿಕೋ' ಎಂಬ ಆಯ್ಕೆಯ ಸ್ವಾತಂತ್ರ್ಯ ಕೊಟ್ಟಾಗ ಆ ಮಾತು ಮಾಧವಿಗೆ ಅರ್ಥಹೀನವಾಗಿ ಕಾಣುತ್ತದೆ. ಆದರೂ ತಂದೆಯ ಮಾತಿನಂತೆ ಸ್ವಯಂವರದಲ್ಲಿ ಭಾಗಿಯಾಗಿ 'ನಾನು ಮೂವರು ರಾಜರು, ಒಬ್ಬರು ಋಷಿಗಳೊಡನೆ ಇದ್ದು ಬಂದವಳು' ಎಂದು ಸತ್ಯ ನುಡಿವಳು.

ಸಿಡಿದೆದ್ದ ಮಾಧವಿ

ಆಗ ಅಲ್ಲಿ ನೆರೆದ ರಾಜರುಗಳು ಈ ಕನ್ಯೆ ಮೂರುರಾಜ್ಯಗಳನ್ನು, ಒಬ್ಬ ಋಷ್ಯಾಶ್ರಮವನ್ನು ಸುತ್ತಿ ಅನುಭವ ಹೆಚ್ಚಿಸಿಕೊಂಡವಳು, ಜಾಣೆ,ಇವಳೇ ಮುಂದಿನ ಮಹಾರಾಣಿ ಇವಳ ಕೈ ಹಿಡಿಯುವುದು ಪರಮ ಭಾಗ, ಎಂದಾಗ 'ಥೂ! ಗಂಡಸು ಜಾತಿಯೇ' ಎಂದು ಜಿಗುಪ್ಸೆಗೊಳ್ಳುತ್ತಾಳೆ. ಆ ಕ್ಷಣವೇ ಮಾಧವಿಗೆ ಬದುಕಿನ ಬಗ್ಗೆ, ಮನುಷ್ಯರ ದಬ್ಬಾಳಿಕೆಯ ಬಗ್ಗೆ ತೀವ್ರ ತಿರಸ್ಕಾರ ಮೂಡುತ್ತದೆ. ಮಾಧವಿ ಸ್ವಯಂವರದ ಮಾಲೆಯನ್ನ ಎಸೆದು, ಸಿಡಿದೆದ್ದು ವ್ಯವಸ್ಥೆಯನ್ನು ತಿರಸ್ಕರಿಸಿ, ಅರಣ್ಯ ಸೇರುವಲ್ಲಿಗೆ ಕಾದಂಬರಿ ಮುಕ್ತಾಯವಾಗುತ್ತದೆ .

ಹೀಗೆ ಅನುಪಮಾ ಅವರು ಎಪ್ಪತ್ತರ ದಶಕದ ನಂತರ ಸ್ತ್ರೀವಾದಿ ಬೌದ್ಧಿಕ ಚೌಕಟ್ಟಿನಲ್ಲಿ ನಿಂತು ಕುಟುಂಬಗಳಲ್ಲಿನ ಗಂಡು– ಹೆಣ್ಣು ಮಕ್ಕಳ ನಡುವಿನ ತಾರತಮ್ಯ, ಹೆಣ್ಣಿನ ದೇಹದ ಘನತೆಯ ನಿರಾಕರಣೆ, ಲೈಂಗಿಕ ಶೋಷಣೆ, ಮಕ್ಕಳ ಮೇಲಿನ ತಾಯಿಯ ಹಕ್ಕಿನ ನಿರಾಕರಣೆ ಮುಂತಾದ ಹಲವು ಸಮಕಾಲೀನ ವೈಚಾರಿಕ ಪ್ರಶ್ನೆಗಳಿಗೆ ಈ ಕಾದಂಬರಿಯ ಮೂಲಕ ಉತ್ತರಿಸಿದ್ದಾರೆ. ಕೊನೆಗೆ ತಾನು ಹೆತ್ತ ಮಕ್ಕಳನ್ನು ತನ್ನದಾಗಿಸಿಕೊಳ್ಳಲಾಗದ ಮಾಧವಿಯ ಅಸಹಾಯಕತೆಯನ್ನು ಮುಖ್ಯನೆಲೆಗೆ ತಂದು, ಅಂತಹ ವ್ಯವಸ್ಥೆಗೆ ಧಿಕ್ಕಾರವೆಸಗಿ, ಶಕ್ತವಾಗಿ ನಿಲ್ಲುವ ಮಾಧವಿಯ ವ್ಯಕ್ತಿತ್ವದ ಮುಂದೆ, ಋಷಿಮುನಿಗಳ, ರಾಜರುಗಳ ,ಅಷ್ಟೇ ಏಕೆ ಯಾವುದೇ ವ್ಯಕ್ತಿಯ ವ್ಯಕ್ತಿತ್ವವು ಮಸುಕಾಗಿ ಬಿಡುವುದು ಇಂದಿಗೂ ಪ್ರಸ್ತುತವೆನಿಸುತ್ತದೆ.

ಎತ್ತ ಹೋಯಿತು ಪ್ರೀತಿ?

● ದಿವ್ಯಾ ಶ್ರೀಧರ್ ರಾವ್

ಹುಟ್ಟುವ ಮೊದಲೇ ಪ್ರೀತಿ ತೋರಿಸಿದ ಅಮ್ಮನ ಕೊನೆಗಾಲದಲ್ಲಿ ಪ್ರೀತಿ ಕೊಡಲಾಗುವುದಿಲ್ಲವೇ ನಮಗೆ? ನಾವು ಕೆಲಸವಿರುವವರು. ಸಿಟಿ ಜೀವನಕ್ಕೆ ಒಗ್ಗಿಕೊಂಡವರು. ನಮಗೆಲ್ಲಿಗೆ ಸಮಯ ಅವಳ ಕೊನೆಗಾಲದಲ್ಲಿ ಪ್ರೀತಿಸಲು? ಹುಟ್ಟಿದ ನಮ್ಮ ಮೊದಲ ಸ್ಪರ್ಶಕ್ಕಾಗಿ ಕಾದು ಕುಳಿತು ಪ್ರೀತಿಯ ಧಾರೆಯನ್ನೇ ಹರಿಸಿದ ಅಪ್ಪನಿಗೆ ಅವರ ವೃದ್ಧಾಪ್ಯದಲ್ಲಿ ನಾವು ಪ್ರೀತಿ ಕೊಟ್ಟೇವಾ? ಪ್ರೀತಿ ಕೊಡಲು ಅವರು ನಮಗಾಗಿ ಬದುಕಿದ ದಿನಗಳ ನೆನಪಿರಬೇಕಲ್ಲ ನಮಗೆ? ನಾವೋ ಸಮಾಜದಲ್ಲಿ ಹೆಸರು ಮಾಡಿದವರು. ನಮ್ಮ ಅಂತಸ್ತು ಏನು ಕಮ್ಮಿಯಾ? ಅವರನ್ನು ನೋಡಿಕೊಳ್ಳಲು ಇದ್ದೇ ಇದೆಯಲ್ಲ ಇನ್ನೊಬ್ಬ ಮಗನ ಮನೆ! ಬಾಲ್ಯದಲ್ಲಿ ತಾಯಿಯ ಸೀರೆ ಸೆರಗಿನಡಿಯಲ್ಲಿ ಓಡಾಡುವಾಗ ಅವರೆಡೆಗೆ ನಮಗಿದ್ದ ಪ್ರೀತಿ ಎತ್ತ ಹೋಯಿತಿಂದು? ಹಸಿವೆಯೆಂದಾಗ ಅಡುಗೆ ಮನೆಯಲ್ಲಿದ್ದ ಪಾತ್ರೆಯ ಬುಡದಲ್ಲಿದ್ದ ಸ್ವಲ್ಪವೇ ಸ್ವಲ್ಪ ಅನ್ನವನ್ನು ಅವಳ ಹಸಿವನ್ನು ಮರೆಮಾಚಿ ಬಡಿಸಿದ್ದಳಲ್ಲ? ಅವಳು ನಮಗೆ ತೋರಿಸಿದ ಮಮಕಾರದ ಕಣ್ಣನ್ನು ದೃಷ್ಟಿಸಿ, ನಾನು ದೊಡ್ಡವನಾ/ಳಾದ ಮೇಲೆ ನಿನ್ನನ್ನು ಚೆನ್ನಾಗಿ ನೋಡಿಕೊಳ್ಳುವೆ ಎನ್ನುವಾಗ ಇದ್ದ ಪ್ರೀತಿ ಇಂದು ಯಾಕಿಲ್ಲ? ಶಾಲೆಯ ಫೀಸಿಗಾಗಿ ಅಪ್ಪನ ಮುಂದೆ ಬಂದು ನಿಂತು, 'ಅಪ್ಪಾ ನಾಳೆ ಶಾಲೆ ಫೀಸು ಕಟ್ಟಲು ಕೊನೆಯ ದಿನ' ಎನ್ನುವಾಗ ಇರುತ್ತಿದ್ದ ಪ್ರೀತಿ ಇಂದೇಕೆ ನಮಗಿಲ್ಲ? ಮಳೆಗಾಲದ ಆರ್ಭಟಕ್ಕೆ ಹೆದರಿ ಮೂಲೆ ಸೇರಿದ ನಮ್ಮ ಬಾಲ್ಯವನ್ನು ನೆನಪುಳಿಯುವಂತೆ ಮಾಡಿದ ಅಪ್ಪನ ಪ್ರೀತಿಗೆ ನಾವು ಕೊಡಬಹುದಾದ ಪ್ರೀತಿಯ ನಿರೀಕ್ಷೆ ಅವರಿಗಿರಬಾರದಾ?

ಮನುಷ್ಯ ಮನುಷ್ಯ ನಡುವಿನ ಸಂಬಂಧಗಳ ಅರ್ಥ ಇಂದು ಬದಲಾಗುತ್ತಿದೆ. ಅದೇ ರೀತಿ, ಹೆತ್ತವರು ಮತ್ತು ಮಕ್ಕಳ ನಡುವಿನ ಸಂಬಂಧಕ್ಕೂ ಹೊಸ ಭಾಷ್ಯವನ್ನು ಈಗಿನ ದಿನಗಳಲ್ಲಿ ಬರೆಯಲಾಗುತ್ತಿದೆಯೆ?

ನಾವು ಚಿಕ್ಕವರಾಗಿದ್ದಾಗ ತಮ್ಮೊಳಗಿನ ಕಲಾವಿದನನ್ನು ಎಚ್ಚರಿಸಿ, ನಮಗೆಲ್ಲ ಕಥೆ ಹೇಳಿತ್ತಿದ್ದ ಅಜ್ಜ ಅಜ್ಜಿಯ ಪ್ರೀತಿಯಿಂದು ನಮ್ಮ ಮಕ್ಕಳಿಗೆ ಬೇಡ ಎನ್ನುವ ಮೂಲಕ, ಇಂದಿನ ಸಮಾಜವು ತನ್ನ ಮೇಲೆ ಆವಾಹಿಸಿಕೊಂಡಿರುವ ಕ್ರೂರತನದ ಪರಿಚಯ ಮಾಡಿಸುತ್ತಿದ್ದೇವೆಂದಲ್ಲವೇ? ನಮಗೆ ಅಂದು ಅಜ್ಜ-ಅಜ್ಜಿಯರಿಂದ ಸಿಕ್ಕಿದ ಪ್ರೀತಿಯನ್ನು, ಇಂದು ನಮ್ಮ ಮಕ್ಕಳಿಗೆ ನೀಡಬಯಸದಷ್ಟು ಸ್ವಾರ್ಥಿಗಳಾದೆವೆ?

ಎತ್ತ ಹೋಯಿತು ಮನುಷ್ಯತ್ವ? ಇಂದು ಆಧುನಿಕ ಯುಗ ನಿಜ; ಆಧುನಿಕ ಯುಗದಲ್ಲಿ ಉತ್ತಮ ವಿದ್ಯಾಭ್ಯಾಸ, ದುಬಾರಿ ಶಾಲೆಗಳು, ಕಂಪ್ಯೂಟರ್‌ಗಳು, ಮೊಬೈಲ್ ಗೇಮ್‌ಗಳು, ಕಾರು, ಬೈಕು ಎಲ್ಲವೂ ತನ್ನಷ್ಟಕ್ಕೆ ತಾನೇ ಈ ಸಮಾಜವನ್ನು ಆಳುತ್ತಿದೆ; ಅವುಗಳ ಜತೆಯಲ್ಲೇ ನಾವು ಹಳೆಯ ಮೌಲ್ಯಗಳನ್ನು ಕಳೆದುಕೊಳ್ಳುತ್ತಿದ್ದೇವೆಯೆ? ಸೋದರತ್ವ ಭಾಗ, ವಿಶ್ವಾಸ, ಅಜ್ಜಿಯ ಮೇಲಿನ ಮಮತೆ, ಪ್ರೀತಿ, ಹಿರಿಯರ ಮೇಲಿನ ಗೌರವ ಎಲ್ಲವೂ, ಆಧುನಿಕ ಕಾಲದಲ್ಲಿ ನಿಧಾನವಾಗಿ ಕಣ್ಮರೆಯಾಗುತ್ತಿದೆಯಲ್ಲಾ, ಇದಕ್ಕೇನು ಕಾರಣ? ಕಾಲ ಕೈ ಮೀರಿದರೂ, ಅದನ್ನು ಮೀರಿ ನಮ್ಮ ತಂದೆ ತಾಯಿಯರನ್ನು, ಹಿರಿಯರನ್ನು, ಒಡಹುಟ್ಟಿದವರನ್ನು ಪ್ರೀತಿಸುವ ಗುಣ ನಮ್ಮಲ್ಲಿ ಮೈಗೂಡಲಿ. ಇಂದು ನಾವು ಪ್ರೀತಿ-ವಿಶ್ವಾಸರಹಿತ ಸಮಾಜದಲ್ಲಿ ಬದುಕುತ್ತಿದ್ದೇವೆ ಎಂದು ಕೊರಗಿನಿಂದ ಹಳಹಳಿಸುವ ಗತಿ, ಮುಂದಿನ ಪೀಳಿಗೆಗೆ ಬಾರದಿರಲಿ.

ಕಣ್ಮರೆಯಾದ ಸಾಕುನಾಯಿ

● ಬಿ. ಎನ್. ಭರತ್

ಹಳ್ಳಿಯಲ್ಲಿ ಒಂದು ನಾಯಿ ಸಾಕಿದ್ದೆವು. ಸಂಜೆಯ ಹೊತ್ತಿನಲ್ಲಿ ಪಕ್ಕದ ಕಾಡಿನಿಂದ ಬಂದ ಒಂದು ಪ್ರಾಣಿ ಆ ನಾಯಿಯನ್ನು ಹೊತ್ತು ಕೊಂಡುಹೋಗಿತ್ತು!

ಕುಂದಾಪುರ ತಾಲೂಕಿನ ಸಿದ್ದಾಪುರದಲ್ಲಿ ನಾಲ್ಕು ವರ್ಷಗಳ ಕಾಲ ನನ್ನ ಬಾಲ್ಯವನ್ನು ಕಳೆದಿದ್ದೆ. 1970ರ ದಶಕ. ಅದೇ ತಾನೆ ಸಿದ್ದಾಪುರ ಎಂಬ ಆ ಹಳ್ಳಿಗೆ ವಿದ್ಯುತ್ ಸಂಪರ್ಕ ದೊರಕಿತ್ತು. ನಮ್ಮ ತಂದೆ ವೃತ್ತಿಯಲ್ಲಿದ್ದ ಆಸ್ಪತ್ರೆಗೆ ಹೊಸದಾಗಿ ಒಂದು ಫ್ರಿಜ್ ಸರಬರಾಜು ಆಗಿತ್ತು. ಅಲ್ಲಿದ್ದ ವೈದ್ಯಾಧಿಕಾರಿಗಳು ನನ್ನನ್ನು ಕರೆದು ಫ್ರಿಜ್ಜಲ್ಲಿ ಇಟ್ಟಿದ್ದ ಐಸ್ ತುಂಡನ್ನು ಪ್ರೀತಿಯಿಂದ ಕೊಟ್ಟಿದ್ದರು. ನಾನು ಅದನ್ನು ಬಾಯಿಗೆ ಹಾಕಿ ಕೂಡಲೇ ಉಗಿದಿದ್ದೆ. ಐಸ್ ತುಂಡು ಏನೆಂದೇ ಗೊತ್ತಿಲ್ಲದ ಕಾಲ ಅದಾಗಿತ್ತು!

ಸಿದ್ದಾಪುರಕ್ಕೆ ಸನಿಹದಲ್ಲಿದ್ದ ಊರುಗಳಾದ ಶಂಕರನಾರಾಯಣ ಮತ್ತು ಕಮಲಶಿಲೆ ದೇವಸ್ಥಾನಗಳ ಜಾತ್ರೆಗೆ ಹೋಗುತ್ತಿದ್ದೆ. ಈಗಲೂ ಪ್ರತೀ ವರ್ಷ ಮಳೆಗಾಲದಲ್ಲಿ ಜೋರು ಮಳೆ ಬಂದು ಕಮಲಶಿಲೆಯ ದುರ್ಗಾ ಪರಮೇಶ್ವರಿ ದೇಗುಲದ ಗರ್ಭ ಗುಡಿಯವರೆಗೆ ನೆರೆ ನೀರು ಬಂದ ಸುದ್ದಿಯನ್ನು ಪತ್ರಿಕೆಗಳಲ್ಲಿ ಓದುವಾಗೆಲ್ಲ ಬಾಲ್ಯದ ದಿನಗಳು ನೆನಪಾಗುವುದಿದೆ.

ಒಂದು ಭಾನುವಾರ ಸಿದ್ದಾಪುರದ ವೈದ್ಯಾಧಿಕಾರಿಯಾದ ಡಾ. ಪ್ರಸಾದ್‌ರವರು ನಮ್ಮನ್ನೆಲ್ಲ ಕರೆದುಕೊಂಡು ಕುಂದಾಪುರಕ್ಕೆ ಹೋಗಿದ್ದರು. ಅಲ್ಲಿ ನಾವು ಥಿಯೇಟರ್ ಒಂದರಲ್ಲಿ ದಿ ಥಾಗ್ ಸಿನಿಮಾ ನೋಡಿದ ಬಳಿಕ ಸಮೀಪದಲ್ಲೇ ಇದ್ದ ಮರವಂತೆಗೆ ಹೋಗಿದ್ದೆವು. ಅದು ಅಲ್ಲಿಗೆ ನಮ್ಮ ಮೊದಲ ಭೇಟಿ, ಒಂದೆಡೆ ಸಮುದ್ರ ಇನ್ನೊಂದೆಡೆ ಹೊಳೆ – ನಡುವಿನಲ್ಲಿ ಹೆದ್ದಾರಿ. ಎಷ್ಟು ರಮಣೀಯ ದೃಶ್ಯ!

ವರ್ಷಕ್ಕೊಮ್ಮೆಯೋ ಎರಡು ಸಲವೋ ಸಿದ್ದಾಪುರದಿಂದ ವಿಟ್ಲದ ಸಮೀಪದ ಕನ್ಯಾನಕ್ಕೆ, ನನ್ನ ಅಜ್ಜನ ಮನೆಗೆ ಹೋಗುತ್ತಿದ್ದೆವು. ಒಮ್ಮೆ ದೀಪಾವಳಿ ಸಮಯ. ಹಳ್ಳಿಗಳಲ್ಲಿ ಸಾಮಾನ್ಯವಾಗಿ ಪಟಾಕಿಗಳಿಗೆ ದುಡ್ಡು ದಂಡ ಹಾಗು ಬೆಂಕಿ ಕಿಡಿ ಮನೆಯ ಹಂಚಿಗೆಲ್ಲ ಬೀಳಬಹುದೆಂಬ ಭಯದಿಂದ ಅಷ್ಟೊಂದು ಪಟಾಕಿಗಳನ್ನು ಹಚ್ಚದಿದ್ದರೂ ನಮ್ಮ ಅಜ್ಜ ಅಂದರೆ ತಾಯಿಯ ತಂದೆ, ಒಮ್ಮೆ ಅಂಗಳದಲ್ಲಿ ಒಂದು ಕಡೆಯಿಂದ ಇನ್ನೊಂದು ಕಡೆಗೆ ಉದ್ದ ದಾರ ಕಟ್ಟಿ ಅದರಲ್ಲಿ ಪಟಾಕಿಯ ಬಸ್ಸಿನ ಬತ್ತಿಗೆ ಬೆಂಕಿ ಹಚ್ಚಿ ಅದು ದಾರದಲ್ಲಿ ವೇಗವಾಗಿ ಸುರು ಸುರು ಎಂದು ಹೋದದ್ದು ಈಗಲೂ ಮನಸ್ಸಲ್ಲಿ ಹಚ್ಚ ಹಸಿರಾಗಿದೆ. ಅದೇ ರೀತಿಯ ಬಸ್ಸನ್ನು ಬೆಂಗಳೂರಲ್ಲಿ ಕೆಲವು ವರ್ಷಗಳ ಹಿಂದೆ ನಾನೂ ಮಕ್ಕಳೊಂದಿಗೆ ಹಚ್ಚಿ ಸಂತಸ ಪಟ್ಟುದು ಹಾಗೂ ಅಜ್ಜನ ಮನೆಯ ಆ ಹಳೆಯ ನೆನಪು ಯಾವಾಗಲೂ ಮರುಕಳಿಸುತ್ತಲೇ ಇರುತ್ತವೆ.

ಮನೆಯಲ್ಲಿದ್ದ ಕಲ್ಲಿದ್ದಲಿನ ಕೆಂಡದ ಇಸ್ತ್ರಿ ಪೆಟ್ಟಿಗೆಯಲ್ಲಿ ತಂದೆಯವರು ಬಟ್ಟೆಗೆ ಇಸ್ತ್ರಿ ಹಾಕುವುದನ್ನು ನೋಡಿ, ನಾನೂ ನನ್ನ ಬಟ್ಟೆಗೆ ಇಸ್ತ್ರಿ ಹಾಕಿಕೊಂಡು ಶಾಲೆಗೆ ಹೋಗುತ್ತಿದ್ದೆ. 50 ವರ್ಷಗಳ ಬಳಿಕವೂ ಅಂತಹ ಶಿಸ್ತಿನ ಅಭ್ಯಾಸಗಳು ನನ್ನ ಕೈ ಬಿಟ್ಟಿಲ್ಲ. ಇದಕ್ಕೆಲ್ಲಾ ನಮ್ಮ ತಂದೆ ಮತ್ತು ಮನೆಯವರು ಬಾಲ್ಯದಿಂದಲೇ ನನ್ನಲ್ಲಿ ಶಿಸ್ತಿನ ಜೀವನಪದ್ಧತಿಯನ್ನು ಬೆಳೆಸಿದ್ದೇ ಕಾರಣ. ಒಮ್ಮೆ ನಾನು ಕೈ ಬೆರಳಿನ ಉಗುರುಗಳನ್ನು ತೆಗೆಯದುದನ್ನು ನೋಡಿ ಓರ್ವ ಶಿಕ್ಷಕರು, 'ನೀನು ಬಟ್ಟೆಗೆಲ್ಲ ಇಸ್ತ್ರಿ ಹಾಕಿಕೊಂಡು ಬರುತ್ತೀ, ಉಗುರು ಯಾಕೆ ತೆಗೆದಿಲ್ಲ?' ಎಂದು ಪ್ರಶ್ನಿಸಿದ್ದರು. ಬೇರೆ ಬೇರೆ ಕಾರಣಗಳಿಂದ ಉಳಿದ ಮಕ್ಕಳಿಗೆ ಗರಿ ಗರಿ ಬಟ್ಟೆಯನ್ನು ಧರಿಸಿ ಬರಲು ಸಾಧ್ಯವಾಗದಿದ್ದರೂ ನನಗೆ ಸಾಧ್ಯವಾದುದು ಹಾಗೂ ಶಿಕ್ಷಕರು ಅದನ್ನು ಗಮನಿಸಿದ್ದು ಈಗಲೂ ಆಗಾಗ ನೆನಪಾಗುವುದಿದೆ.

ಸಿದ್ದಾಪುರದಲ್ಲಿದ್ದಾಗ ನಾವು ಒಂದು ನಾಯಿಯನ್ನು ಸಾಕಿದ್ದೆವು. ಒಮ್ಮೆ ಮುಸ್ಸಂಜೆ ಹೊತ್ತಲ್ಲಿ ಅಲ್ಲೇ ಪಕ್ಕದಲ್ಲಿದ್ದ ಕಾಡಿನಿಂದ ಯಾವುದೋ ಒಂದು ಪ್ರಾಣಿ ಬಂದು (ಚಿರತೆ ಇರಬಹುದೆ? ನನಗೆ ಸ್ಪಷ್ಟತೆ ಇಲ್ಲ) ನಮ್ಮ ನಾಯಿಯನ್ನು ಕಚ್ಚಿಕೊಂಡು ಹೋದಾಗ, ನಾನು ಅದನ್ನು ರಕ್ಷಿಸಲೆಂದು ಅದರ ಹಿಂದೆಯೇ ಬಹಳ ದೂರ ಓಡಿದ್ದೆ. ನಾನಾಗ ಬಹಳ ಚಿಕ್ಕವನು, ನಾಲ್ಕನೆಯ ಅಥವಾ ಐದನೆಯ ತರಗತಿಯಲ್ಲಿದ್ದಿರಬೇಕು. ಕೊನೆಗೆ ಆ ಕತ್ತಲಲ್ಲಿ ಅದು ಸಿಗಲೇ ಇಲ್ಲ. ಸಾಕಿದ ನಾಯಿಯನ್ನು ಕುರ್ಕ ಎಂಬ ಪ್ರಾಣಿ ಹಿಡಿದುಕೊಂಡು ಹೋಗುತ್ತದೆ ಎಂದು ಸುತ್ತಮುತ್ತಲಿದ್ದ ಹಳ್ಳಿ ಜನರು ಹೇಳಿದರು. ಆ ರಾತ್ರಿ ಯಾವ ಪ್ರಾಣಿ ಬಂದು ನಮ್ಮ ನಾಯಿಯನ್ನು ಕಚ್ಚಿಕೊಂಡು ಹೋಗಿದ್ದು ಎಂದು ನನಗೆ ಈಗಲೂ ಗೊತ್ತಿಲ್ಲ.

ಆಮೇಲೆ ಇನ್ನೊಂದು ನಾಯಿಯನ್ನು ಸಾಕಿದ್ದೆವು. ತಂದೆಗೆ ಅಲ್ಲಿಂದ ಮಂಗಳೂರಿಗೆ ವರ್ಗವಾದಾಗ ಲಾರಿಯಲ್ಲಿ ಮನೆ ಸಾಮಾನು ಸಾಗಿಸುವಾಗ, ಮುಂದೆ ಡ್ರೈವರ್ ಕ್ಯಾಬಿನ್‌ನಲ್ಲಿ ನಮ್ಮ ಜೊತೆಗೇ ನಮ್ಮ ನಾಯಿಯನ್ನೂ ಕರೆದುಕೊಂಡು ಬಂದಿದ್ದೆವು. ಮುಂದೆ ಅಲ್ಲಿಂದ ವರ್ಗವಾಗಿ ವಿಟ್ಲಕ್ಕೆ ಹೋದೆವು. ಅಲ್ಲಿ ನಮ್ಮ ಮನೆಯ ಹತ್ತಿರವಿದ್ದವರು ಸಾಕಿದ್ದ ಒಂದು ಬಿಳೀ ನಾಯಿ ನಮ್ಮ ಮನೆಗೂ ಆಗಾಗ ಬರುತ್ತಿತ್ತು. ನಾವು ಅದನ್ನು ಕರೆದಾಗಲಂತೂ ಮೈ ಇಡೀ ಕುಲುಕಿಸುತ್ತಾ ನಮ್ಮ ಬಳಿಗೆ ಓಡೋಡಿ ಬರುತ್ತಿದ್ದ ಕಾರಣ ಕಾಲೇಜು ಓದುತ್ತಿದ್ದ ನನ್ನ ಅಕ್ಕ ಅದನ್ನು 'ನಾಟ್ಯ ಮಯೂರಿ' ಅನ್ನುತ್ತ ಕರೆದು, ನಂತರ ಅದಕ್ಕೆ 'ಮಯೂರಿ' ಅಂತಲೇ ಹೆಸರಿಟ್ಟಿದ್ದಳು.

ಹತ್ತಿರದಲ್ಲೇ ಇದ್ದ ಇನ್ನೊಂದು ಮನೆಯ ಒಂದು ನಾಯಿ ನಮ್ಮ ಮನೆಗೆ ಆಗಾಗ ಬಂದು ನಾವು ಹಾಕುವ ದೋಸೆಯನ್ನು ಪ್ರೀತಿಯಿಂದ ತಿನ್ನುತ್ತಿತ್ತು. ನಾನು ಶಾಲೆಯಿಂದ ಸಂಜೆ ಹಿಂದಿರುಗುತ್ತಿದ್ದಾಗ ಮನೆಯ ಎದುರಿದ್ದ ಗದ್ದೆಯಲ್ಲಿ ಓಡೋಡಿ ಬಂದು ನನ್ನ ಮೇಲೆಯೇ ಹಾರುತ್ತಿತ್ತು. ನಾನು ಕಾಲೇಜಲ್ಲಿದ್ದಾಗ ಮೊದಲ ಬಾರಿ ಕ್ಯಾಮರಾಕ್ಕೆ ರೀಲ್ ಹಾಕಿ ಫೋಟೋ ತೆಗೆಯುವುದನ್ನು ಕಲಿಯುತ್ತಿದ್ದಾಗ ನಮ್ಮ ಮನೆಯ ಜಗಲಿಯಲ್ಲಿ ಕುಳಿತಿದ್ದ ಈ ನಾಯಿಯ ಫೋಟೋವನ್ನೂ ತೆಗೆದಿದ್ದೆ. 40 ವರ್ಷಕ್ಕಿಂತಲೂ ಹೆಚ್ಚಾದರೂ ಈಗಲೂ ನನ್ನ ಬಳಿ ಇರುವ ಆ 'ಮಂಜು ನಾಯಿ'ಯ ಫೋಟೋ ಹಳೆಯ ನೆನಪುಗಳನ್ನು ಮರುಕಳಿಸಲು ಅನುವು ಮಾಡಿಕೊಡುತ್ತಿದೆ.

ಈಗ ನಿವೃತ್ತ ಜೀವನವನ್ನು ನಗರದಲ್ಲಿ ಕಳೆಯುತ್ತಿರುವಾಗ, ಮನಸ್ಸಿಗೆ ಒಂದು ಯೋಚನೆ ಬರುತ್ತಿದೆ : ಸಾಧ್ಯವಿಲ್ಲವೆಂದು ಗೊತ್ತಿದ್ದರೂ ಒಮ್ಮೊಮ್ಮೆ ಅನಿಸುತ್ತದೆ, ಆ ಬಾಲ್ಯ ಮರಳಿ ಬರುವಂತಿದ್ದರೆ? (ಸಾಂದರ್ಭಿಕ ಚಿತ್ರ)